ನಿಮ್ಮ ಆ್ಯಟಿಟ್ಯೂಡ್ ಈ ರೀತಿ ಇರುತ್ತದೆಯೋ ಆಗ ಬೇರೆಯವರನ್ನು ಸರ್ಕಾರ ಇನ್ವಾಲ್ವ್ ಮಾಡಬೇಕಾದರೆ ಆ ಹಣವನ್ನು ಬೇರೆಯವರಿಗೆ ಕೊಡಬೇಕಾದರೆ ಇದನ್ನು ಮಾಡುವುದು ಸರಿ ಎಂದು ಹೇಳಿ ಕೆಲವು ಸಲ ಈ ರೀತಿ ಮಾಡಿದ್ದಾರೆ. ನೀವು ಬೇಕಾದರೆ ಯಾವ ಕ್ಲಾಸ್ಗೇ ಆಗಲೀ ರೆಪ್ರೆಸೆಂಟೇಷನ್ ಇಲ್ಲ ಅಂಥಹ ಕ್ಲಾಸ್ಗೆ ಮಾತ್ರ ನಾಮಿನೇಷನ್ ಮಾಡುತ್ತೇವೆ ಎಂದು ಹೇಳಿದರೆ ಸ್ವಾಗತ. ಆದರೆ ಅವುಗಳಿಗೆ ಬೇಡವೇ ಬೇಡ ನಾವೇ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದರೆ ಪುನಃ ಈ ಪ್ರಶ್ನೆ ಬರುತ್ತದೆ, ಬೇರೆಯವರು ಎಜಿಟೇಟ್ ಮಾಡುತ್ತಾರೆ.

ಅಧ್ಯಕ್ಷರು : ಈಗ ಹೆಚ್.ಸಿ. ಬಾಲಕೃಷ್ಣರವರು ಕಂದಾಯ ಮಂತ್ರಿಗಳನ್ನು ಪ್ರಶ್ನೆ ಕೇಳಿ.

ಮಾಗಡಿ ಸೋಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕುರಿತು

2369 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ಸೋಮೇಶ್ವರ ದೇವಸ್ಥಾನವು ಪುರಾತನವಾದ ಮಹತ್ವವಾದ ಇತಿಹಾಸವನ್ನು ಹೊಂದಿದ್ದು, ಇಂದು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಶಿಥಿಲಗೊಂಡಿರುವ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಎಷ್ಟು ವೆಚ್ಚವಾಗಬಹುದು ಎಂಬುದನ್ನು ಸರ್ಕಾರ ಅಂದಾಜಿಸಿದೆಯೇ?*

ಇ) *ಈ ಪುರಾತನವಾದ ಮಹತ್ವವಾದ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶೀಘ್ರದಲ್ಲಿಯೇ, ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ನಿರ್ದೇಶನಾಲಯ ಇವರು ತಯಾರಿಸಿದ ಅಂದಾಜಿನ ಪ್ರಕಾರ ಸುಮಾರು 15.00 ಲಕ್ಷ ರೂ.

ಇ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರೇ, ಸೋಮೇಶ್ವರ ಸ್ವಾಮಿ ದೇವಸ್ಥಾನದ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಇದನ್ನು ನಾವು ಮೊದಲೇ ರಾಜ್ಯದ ಪ್ರಾಚೀನ ವಸ್ತು ಸಂಗ್ರಹಾಲಯದ ಅಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇವೆ. ಅವರಿಂದ ಇದಕ್ಕೆ ಉತ್ತರವಾಗಿ ಒಂದು ಪತ್ರ ಕೂಡ ನಮಗೆ ಬಂದಿದೆ. ಅವರು ಕಾಗದದಲ್ಲಿ 10 ಲಕ್ಷ ರೂ.ಗಳು ಗೋಪುರ ಕಟ್ಟುವುದಕ್ಕೆ ಬೇಕಾಗುತ್ತದೆ ಎಂದು ಬರೆದಿದ್ದಾರೆ. ಇದರ ಸಲುವಾಗಿ ಅಂದಾಜು ಪಟ್ಟಿಯನ್ನೂ ಕೂಡ ಕಳುಹಿಸಿದ್ದಾರೆ, ಇದರ ಜೊತೆಗೆ ಸುತ್ತಮುತ್ತ ಶಿಥಿಲವಾದ ಗೋಡೆಗಳನ್ನು ಕಟ್ಟುವುದಕ್ಕೆ 5 ಲಕ್ಷ ರೂ.ಗಳು ಬೇಕು, ಒಟ್ಟು 15 ಲಕ್ಷ ಲಕ್ಷ ರೂಪಾಯಿ ಬೇಕಾಗುತ್ತದೆಂದು ತಿಳಿಸಿದ್ದಾರೆ. ಈಗ ಅಷ್ಟು ಹಣವನ್ನು ಸರ್ಕಾರದಿಂದ ಕೊಡುವುದಕ್ಕೆ ಕಷ್ಟವಾಗುತ್ತದೆ. ನಮಗೆ ಇರುವ ಒಂದು ಕೋಟಿ ರೂ.ಗಳಲ್ಲಿ ಒಂದೇ ದೇವಸ್ಥಾನಕ್ಕೆ 15 ಲಕ್ಷ ರೂ.ಗಳನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಆದರೂ ಇದು ಒಂದು ಪುರಾತನವಾದ ದೇವಸ್ಥಾನ. ಇದನ್ನು ಉಳಿಸಿಕೊಳ್ಳಬೇಕಾದುದು ಕೂಡ ನಮ್ಮ ಕರ್ತವ್ಯ. ಇದಕ್ಕೋಸ್ಕರ ಒಂದು ಸಮಿತಿಯನ್ನೂ ಕೂಡ ರಚಿಸಿದ್ದೇನೆ. ಜನಗಳಿಂದ ಹಣವನ್ನು ಸಂಗ್ರಹ ಮಾಡುವುದಕ್ಕೆ ಈ ಸಮಿತಿಯನ್ನು ಮಾಡಿದೆ, ಈ ಸಮಿತಿಯಲ್ಲಿ ಮಾನ್ಯ ಸದಸ್ಯರು ಕೂಡ ಇದ್ದಾರೆ, ಹಾಗೆ ಹಿಂದಿನ ಮಾಜಿ ಮಂತ್ರಿಗಳು ಕೂಡ ಇದ್ದಾರೆ. ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ಈ ವಂತಿಗೆಯನ್ನು ವಸೂಲು ಮಾಡುವುದಕ್ಕೆ

ಮಾಡಿದ್ದಾರೆ. ಇದರಲ್ಲಿ ವಂತಿಗೆ ಎಷ್ಟು ವಸೂಲು ಆಗುತ್ತದೆ ಎಂಬುದನ್ನು ನೋಡಿಕೊಂಡು ನಮ್ಮ ಕೈಯಲ್ಲಿ ಎಷ್ಟು ಆಗುತ್ತದೆಯೋ ಅಷ್ಟನ್ನು ಈ ವರ್ಷ ಒದಗಿಸಿ ದುರಸ್ತಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಹಿಂದೆ ವಿಧಾನ ಪರಿಷತ್ತಿನಲ್ಲಿ ಇದೇ ವಿಚಾರವಾಗಿ ಸನ್ಮಾನ್ಯ ಟಿ.ಎ. ರಂಗಯ್ಯನವರು ಪ್ರಸ್ತಾಪ ಮಾಡಿದ್ದಾಗ ಹಿಂದೆ ಇದ್ದಂಥ ಮಂತ್ರಿಗಳಾದ ಶ್ರೀ ರಾಜಾ ಅಮರೇಶ್ ನಾಯಕ್ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಸಭೆಯನ್ನೂ ಕೂಡ ಮಾಡಿ ಅವರು ಒಂದು ಆಶ್ವಾಸನೆಯನ್ನೂ ಕೊಟ್ಟಿದ್ದರು. ಆ ಆಶ್ವಾಸನೆ ಏನಾಗಿದೆ, ಯಾವ ಹಂತದಲ್ಲಿದೆ, ಮಂತ್ರಿಗಳು ಅವ್ರೊತ್ತು ಕೆಲಸವನ್ನು ಇನ್ನೇನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ ಕೆಲಸ ಯಾವ ಹಂತದಲ್ಲಿದೆ ಎನ್ನುವುದು ನಮಗೆ ಬೇಕು. ಮತ್ತೆ ಇನ್ನೊಂದು ವಿಚಾರ. ನೀವು ಸರ್ಕಾರದ ವತಿಯಿಂದ ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ, ಬಹುಶಃ ಇದೇ ರೀತಿ ಪರಿಶೀಲನೆ ಮಾಡುತ್ತೇವೆ ಎಂದು ಹೀಗೆ ಕೆಲವು ದಿವಸಗಳನ್ನು ಬಿಟ್ಟರೆ ಅಲ್ಲಿ ಗೋಡೆಯೆಲ್ಲಾ ಕುಸಿದು ಹೋಗಿ ಅಲ್ಲಿ ಏನೂ ಇರಲಿಲ್ಲವೇನೋ ಎನ್ನುವ ರೀತಿಯಲ್ಲಿ ಆಗುತ್ತದೆ. ಆದುದರಿಂದ ಸರ್ಕಾರ ನಿಖರವಾಗಿ ಎಷ್ಟು ದಿವಸಗಳಲ್ಲಿ ಎಷ್ಟು ಹಣವನ್ನು ನಾವು ಇದಕ್ಕಾಗಿ ಖರ್ಚು ಮಾಡುತ್ತೇವೆ ಎಂಬ ಉತ್ತರವನ್ನೂ ಮಾನ್ಯ ಕಂದಾಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈ ಹಿಂದೆ ಏನು ಆಶ್ವಾಸನೆಯನ್ನು ಕೊಟ್ಟಿದ್ದರು ಎಂಬುದು ನನಗೆ ಗೊತ್ತಿಲ್ಲ, ಸರ್ಕಾರ ಒಂದೇ ಬಾರಿಗೆ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಕಷ್ಟವಾಗುತ್ತದೆ. ಸನ್ಮಾನ್ಯ ಸದಸ್ಯರು ಈಗ ಏನು ಒಂದು ಸಮಿತಿಯಲ್ಲಿ ಇದ್ದಾರೆ, ಅವರು ಎಷ್ಟು ಬೇಗ ವಂತಿಗೆಯನ್ನು ವಸೂಲು ಮಾಡುತ್ತಾರೆ ಅಷ್ಟು ಬೇಗ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಅನುಸೂಚಿತ ಉದ್ದಿಮೆಗಳ ಸಂಖ್ಯೆ

1086 - ಶ್ರೀ ಐಯನೂರು ಮಂಜುನಾಥ (ಹೊಸನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಿಷ್ಠ ವೇತನ ಕಾಯ್ದೆ 1948ರ ಅಡಿಯಲ್ಲಿ ಬರುವ ಅನುಸೂಚಿತ ಉದ್ದಿಮೆಗಳು ಎಷ್ಟು?

ಆ) ಈ ಅನುಸೂಚಿತ ಉದ್ದಿಮೆಗಳಲ್ಲಿ ಅಪಾಯಕಾರಿ ಉದ್ದಿಮೆಗಳು ಎಷ್ಟು?

ಇ) ಈ ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರ ನಿಷೇಧ ಮತ್ತು ನಿಯಂತ್ರಣ ನಿಯಮಗಳನ್ನು ಜಾರಿಗೊಳಿಸಲಾಗಿದೆಯೇ?

ಈ) ಹಾಗಾದರೆ ಕಾರ್ಮಿಕ ಕಾಯ್ದೆಗಳೊಂದಿಗೆ ಸದರಿ ನಿಯಮಗಳನ್ನು ಜಾರಿಗೊಳಿಸಲಾಗುತ್ತಿದೆಯೇ?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 61 (ಅರವತ್ತೊಂದು)

ಆ) 3 (ಮೂರು)

(1) ನಿರ್ಮಾಣ ಹಾಗೂ ರಸ್ತೆಗಳ ನಿರ್ವಹಣೆ ಅಥವಾ ಕಟ್ಟಡ ನಿರ್ಮಾಣ

(2) ಹೊಗೆಸೊಪ್ಪು (ಬೀಡಿ ಸುತ್ತುವುದು)

(3) ಟ್ಯಾನರೀಸ್ ಉದ್ಯಮ

ಇ) ಹೌದು